ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಜಿ.ಕೆ.ವಿ.ಕೆ., ಬೆಂಗಳೂರು-560065

* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 28-05.2021

# ಚಿಕ್ಕಬಳ್ಳಾಪುರ ಜಿಲ್ಲೆಗೆ ಸೀಮಿತವಾಗಿದೆ

## ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)
## (ದಿನಾಂಕ 29-05-2021 ರಿಂದ 02-06-2021 ವರೆಗೆ)

| ನಿಯತಾಂಕಗಳು | 29.05.2021 | 30.05.2021 | 31.05.2021 | 01.06.2021 | 02.06.2021 |
|---|---|---|---|---|---|
| ಮಳೆ (ಮಿ ಮಿ) | 0 | 4 | 1 | 2 | 3 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 33 | 33 | 34 | 34 | 35 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 20 | 20 | 20 | 20 | 20 |
| ಮೋಡ ( ಪ್ರಮಾಣ) | 3 | 3 | 3 | 4 | 4 |
| ಅರ್ದ್ರತೆ 7.20 ಬೆ (ಶೇ) | 72 | 72 | 70 | 73 | 75 |
| ಅರ್ದ್ರತೆ 2.20 ಮ (ಶೇ) | 64 | 64 | 64 | 67 | 67 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 7 | 6 | 7 | 6 | 5 |
| ಗಾಳಿಯ ದಿಕ್ಕು ( ಡಿಗ್ರಿ) | 283 | 283 | 283 | 270 | 283 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರ ಮಳೆ0ಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ 33.0-35.0$^{o}$ C ಮತ್ತು ಕನಿಷ್ಠ 20.0$^{o}$ C ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **70-75** % ಇದ್ದು ಮಧ್ಯಾಹ್ನ **64-67** % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **5-7** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

- ರೋಹಿಣಿ ನಕ್ಷತ್ರದ ಮಳೆಯ ಕಾಲವು ಮೇ ತಿಂಗಳ 25 ರಿಂದ ಜೂನ್ 7 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 61.9 ಮಿ.ಮೀ. ವರೆಗೆ ಮಳೆಯಾಗುತ್ತದೆ.

## ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಹವಾಮಾನ ಆಧಾರಿತ ಕೃಷಿ ಸಲಹೆಗಳು |
|---|---|
| ಸಾಮಾನ್ಯ | ➢ ಕೋವಿಡ್-19 ವೈರಾನುವಿನ ನಿಯಂತ್ರಣಕ್ಕಾಗಿ ರೈತರು ವ್ಯಕ್ತಿಯಿಂದ ವ್ಯಕ್ತಿಗೆ 3-4 ಅಡಿಗಳ ಅಂತರವನ್ನು ವಿಶ್ರಾಂತಿ ಸಮಯದಲ್ಲಿ, ಆಹಾರ ಸೇವನೆಯ ಸಂದರ್ಭದಲ್ಲಿ, ಕೃಷಿ ಉತ್ಪನ್ನಗಳನ್ನು ಸಂಗ್ರಹಿಸುವಾಗ, ಇಳಿಸುವಾಗ/ಹೊತ್ತೊಯ್ಯು ಅಡಕಿಸುವಾಗ ಹೀಗೆ ಪ್ರತಿ ಹಂತದಲ್ಲೂ ಸುರಕ್ಷಿತಾ ದೃಷ್ಟಿಯಿಂದ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು. ಎಲ್ಲಾ ಕೃಷಿ ಪರಿಕರಗಳ ಅಂಗಡಿಗಳು ತೆರೆದಿರುತ್ತವೆ. ಕೃಷಿಕರು ಈ ಅಂಗಡಿಗಳಲ್ಲಿ ಬೀಜ, ಗೊಬ್ಬರ ಮತ್ತು ರಾಸಾಯನಿಕಗಳನ್ನು ಕೊಳ್ಳುವಾಗ ಪರಸ್ಪರ 4 ಅಡಿಗಳ ಅಂತರವನ್ನು ಕಾಯ್ದುಕೊಳ್ಳಬೇಕು<br>➢ ಮುಂಬರುವ ಬಿತ್ತನೆಗೆ ಅಗತ್ಯವಿರುವ ಬಿತ್ತನೆ ಬೀಜಮಾದರಿ0ಯನ್ನು ಬೀಜಪರೀಕ್ಷಾಲ0ಯಕ್ಕೆ ಕಳುಹಿಸುವ ಮೂಲಕ ಮೊಳಕೆ ಪ್ರಮಾಣದ ಸಾಮರ್ಥ್ಯ ತಿಳಿದುಕೊಳ್ಳುವುದು.<br>➢ ಎರಡು ಬೆಳೆ ಪದ್ಧತಿಗಳು: ಆಳವಾದ ಮಣ್ಣನ್ನು ಹೊಂದಿರುವ ಹಾಗೂ 5-6 ತಿಂಗಳುದ್ದಕ್ಕೂ ಮಳೆ ಸಮನಾಗಿ ಬೀಳುವ ಪ್ರದೇಶಗಳಲ್ಲಿ ಎರಡು ಬೆಳೆ ಪದ್ಧತಿಯನ್ನು ಅನುಸರಿಸಬಹುದು.<br>➢ ಎರಡು ಬೆಳೆ ಪದ್ಧತಿ ಅನುಸರಿಸುವ ರೈತರುಸದಾ ಜಾಗರೂಕರಾಗಿ, ಬೀಳುವ ಮಳೆಯನ್ನು ಸಂರಕ್ಷಣೆ ಮಾಡಿಕೊಂಡು ಹೆಚ್ಚಿನ ಖರ್ಚು ಭರಿಸಲು ಸಿದ್ಧವಿದ್ದಲ್ಲಿ ವರ್ಷದಲ್ಲಿ ಎರಡು ಬೆಳೆಗಳನ್ನು ಖುಷ್ಕಿ ಪ್ರದೇಶದಲ್ಲಿಯೂ ತೆಗೆದುಕೊಳ್ಳಲು ಸಾಧ್ಯ.<br>➢ ಮುಂಗಾರು ಹಂಗಾಮಿಗೆ ಸಿದ್ಧತೆಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಬೇಸಿಗೆ/ಪೂರ್ವ ಮುಂಗಾರು ಮಳೆಯ ಉಪಯೋಗ ಪಡೆದು ರೈತರು ತಮ್ಮ ಜಮೀನಿನಲ್ಲಿ ಅಂತರ ಬದು ಪ್ರದೇಶದ ಉಬ್ಬು ತಗ್ಗುಗಳನ್ನು ಸಮ ಮಾಡಿ, ಬದುಗಳನ್ನು ಭದ್ರ ಪಡಿಸುವುದರಿಂದ ಫಲವತ್ತಾದ ಮೇಲ್ಮಣ್ಣು ಕೊಚ್ಚುವಿಕೆ ತಡೆಯಬಹುದು ಹಾಗೂ ಮಳೆ ನೀರು ಮತ್ತು ತೇವಾಂಶ ಸಮಾನ ಹಂಚಿಕೆಯಾಗುವಂತೆ ಮಾಡಿ ತಗ್ಗುಗಳಲ್ಲಿ ನೀರು ನಿಲ್ಲುವುದನ್ನು ನಿಯಂತ್ರಿಸಿ ಮಳೆಯಾಶ್ರಿತ ಬೆಳೆಗಳಲ್ಲಿ ಉತ್ತಮ ಇಳುವರಿ ಪಡೆಯಬಹುದು.<br>➢ ಚಿಕ್ಕಬಳ್ಳಾಪುರ ಜಿಲ್ಲೆಯ ವಾರ್ಷಿಕ ಮಳೆ ಪ್ರಮಾಣವು 700 ಮಿ.ಮೀ. ಇರುವುದರಿಂದ ಮಳೆಯಾಶ್ರಿತ ಬೇಸಾಯದಲ್ಲಿ ಎರಡು |

| | |
|---|---|
| | ಬೆಳೆ ಪದ್ಧತಿಗೆ ಸೂಕ್ತವಾಗಿದೆ. ಏಪ್ರಿಲ್– ಮೇ. ತಿಂಗಳಿನಲ್ಲಿ ಮೊದಲ ಬೆಳೆಯಾಗಿ ಅಲ್ಪಾವಧಿ ತಳಿ ಅಲಸಂದೆ (KBC-9, IT38956-1, and PGCP-6 ) ಅವರೆ (HA 3, HA 4) ಹಾಗು ಎಳ್ಳನ್ನು ಬಿತ್ತನೆ ಮಾಡಬಹುದು, ಅಥವಾ ಹಸಿರೆಲೆ ಗೊಬ್ಬರವಾಗಿ ಅಪ್ಸೆಣಬು/ಹುರುಳಿ ಬೆಳೆದು ಮಣ್ಣಿಗೆ ಫಲವತ್ತತೆ ಹೆಚ್ಚಿಸಬಹುದು. ತದನಂತರ ಮುಂಗಾರು ಹಂಗಾಮಿನಲ್ಲಿ ( ಜುಲೈ–ಆಗಸ್ಟ್) ಎರಡನೇ ಬೆಳೆಯಾಗಿ ಮಧ್ಯಮಾವಧಿ (GPU 28, ML 365) ಅಥವಾ ಅಲ್ಪಾವಧಿ(KMR 630, KMR 340, GPU 48) ತಳಿ ರಾಗಿಯನ್ನು ಬೆಳೆದು ಉತ್ತಮ ಇಳುವರಿ ಪಡೆಯುವುದರ ಜೊತೆಗೆ ಅಧಿಕ ಲಾಭ/ಆದಾಯಗಳಿಸಬಹುದು.<br>ಎಲ್ಲೆಲ್ಲಿ ಉತ್ತಮ ಮಳೆಯಾಗಿರುವ ಪ್ರದೇಶದಲ್ಲಿ ಹಾಗು ಮಣ್ಣಿನ ತೇವಾಂಶ ಸಾಕಷ್ಟು ಇರುವ ಕಡೆಗಳಲ್ಲಿ ದೀರ್ಘಾವಧಿ ಬೆಳೆಗಳಾದ ತೊಗರಿ ತಳಿಗಳಾದ ಬಿ.ಆರ್.ಜಿ–1, 2, 4 ಮತ್ತು 5 , ಟಿ.ಟಿ.ಬಿ–7 ಹಾಗು ಹರಳು ಬೆಳೆಯ ತಳಿಗಳಾದ ಡಿ.ಸಿ.ಎಚ್–7, 32 ಮತ್ತು 177 ಬಿತ್ತಲು ಸೂಕ್ತ ಸಮಯ. |
| **ಮಾವು** | ➢ ಮಾವಿನ ಬೆಳೆಗಳಲ್ಲಿ ಹಣ್ಣು ನೊಣದ ನಿಯಂತ್ರಣಕ್ಕಾಗಿ ಕಾರ್ಬರಿಲ್ 4 ಗ್ರಾ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಣೆ ಮಾಡಿ.<br>➢ ಹಣ್ಣನ್ನು ಕಟಾವು ಮಾಡುವ ಸಮ0ುದಲ್ಲಿ ನೆಲಕ್ಕೆ ತಾಗದ ರೀತಿ ಎಚ್ಚರ ವಹಿಸಿ. ಇದರಿಂದ ಕಟಾವಿನ ನಂತರ ಶಿಲೀಂಧ್ರದಿಂದ ಬರುವ ಹಲವಾರು ರೋಗಗಳನ್ನು ತಡೆ0ುಬಹುದು.<br>➢ ಮಾವು ಬೆಳೆಗಾರರು ಚೆನ್ನಾಗಿ ಬಲಿತು ಕಟಾವಿಗೆ ಬಂದಿರುವ ಮಾವಿನ ಕಾಯಿಯನ್ನು ಕಟಾವು ಮಾಡುವಾಗ ಒಂದು ಇಂಚು ತೊಟ್ಟನ್ನು ಬಿಟ್ಟು ಕಟಾವು ಮಾಡಬೇಕು. ನಂತರ ಮಾವಿನ ಕಾಯಿಗಳನ್ನು ಪ್ಲಾಸ್ಟಿಕ್ ಕ್ರೇಟಿನಲ್ಲಿ ಪೇಪರ್ ಹಾಕಿ ಜೋಡಿಸಬೇಕು. ಕಟಾವು ಮಾಡಿದ 24 ಗಂಟೆಯ ನಂತರ ಕ್ರೇಟ್‌ಗಳನ್ನು ಒಂದರ ಮೇಲೊಂದರಂತೆ 5 ರಿಂದ 6 ಕ್ರೇಟ್‌ಗಳನ್ನು ಅರ್ಧ ಅಡಿ ಅಂತರದಲ್ಲಿ ಜೋಡಿಸಿ ಮದ್ಯದಲ್ಲಿ ಸಣ್ಣ ಪ್ಲಾಸ್ಟಿಕ್ ಲೋಟಗಳಲ್ಲಿ 300 ಮಿ.ಲೀ. ನೀರಿನಲ್ಲಿ 10 ಮಿ.ಲೀ. ಎಥಿಲಿನ್ ದ್ರಾವಣ ಹಾಕಿ ನಂತರ 10 ಗ್ರಾಂ ನಷ್ಟು ಕಾಸ್ಟಿಕ್ ಸೋಡ (Sodium hydroxide) ಹಾಕಿಡಬೇಕು. ನಂತರ ಟಾರ್ಪಾಲ್‌ನಿಂದ ಗಾಳಿಯಾಡದಂತೆ ಭದ್ರವಾಗಿ ಮುಚ್ಚಬೇಕು. ಹೀಗೆ ಮಾಡಿದ 48 ಅಥವಾ 60 ಗಂಟೆಯ ನಂತರ ಟಾರ್ಪಾಲ್ ತೆಗೆದು ಗಾಳಿಯಾಡಲು ಬಿಡಬೇಕು. 1 ಟನ್ ಹಣ್ಣಿಗೆ 8 ರಿಂದ 10 ಗ್ಲಾಸ್‌ಗಳಲ್ಲಿ ಎಥಲಿನ್ ಇಡಬೇಕು. ಈ ರೀತಿಯಾಗಿ ನೈಸರ್ಗಿಕವಾಗಿ ಮಾಗಿಸುವುದರಿಂದ ಗುಣಮಟ್ಟದ ಹಣ್ಣನ್ನು ಪಡೆಯುವುದರ ಜೊತೆಗೆ ಉತ್ತಮ ಮಾರುಕಟ್ಟೆ ದರವನ್ನು ಪಡೆಯಬಹುದು.<br>➢ ಮೇ ತಿಂಗಳಿನಲ್ಲಿ ಭೂಮಿಯನ್ನು ಒಂದೆರಡು ಸಾರಿ ಉಳುಮೆ ಮಾಡಿ ಸಮಮಾಡಬೇಕು. ಅನಂತರ 10ಮೀ. ಅಂತರದಲ್ಲಿ 90 ಘನ ಸೆಂ.ಮೀ. ಗಾತ್ರದ ಗುಂಡಿಗಳನ್ನು ತೆಗೆದು ಬಿಸಿಲಿಗೆ ಬಿಡಬೇಕು. ಒಂದೆರಡು ವಾರಗಳ ನಂತರ ಅವುಗಳಿಗೆ ಸಮ ಪ್ರಮಾಣದ ಕೊಟ್ಟಿಗೆ ಗೊಬ್ಬರ ಮತ್ತು ಮೇಲ್ಮಣ್ಣುಗಳ ಮಿಶ್ರಣವನ್ನು ಹರಡಿ ತುಂಬಬೇಕು. |
| | **ಹೈನುಗಾರಿಕೆ** |
| **ಪಶುಸಂಗೋಪನೆ** | **ಬೇಸಿಗೆ ತಿಂಗಳಿನಲ್ಲಿ ಪಶು ಸಂಗೋಪನಾ ಸಲಹೆಗಳು :**<br>➢ ಬಿಸಿಲು ಹೆಚ್ಚಾಗಿರುವುದರಿಂದ ಹಸಿರು ಹುಲ್ಲಿನ ಅಭಾವ ಕಂಡುಬರುತ್ತದೆ ಆದುದರಿಂದ ಹಗೇವಿನಲ್ಲಿ ರಸಮೇವನ್ನು ತಯಾರಿಸಿ ಮತ್ತು ಒಣ ಹುಲ್ಲು ಮತ್ತು ಬೆಳೆಯ ಉಳಿಕೆಗಳನ್ನು ದನಕರುಗಳಿಗೆ ಕೊಡಿ.<br>➢ ದನಕರುಗಳ ಕೊಟ್ಟಿಗೆಯ ಮೇಲೆ 4–6 ಇಂಚು ಹುಲ್ಲಿನ ಹೊದಿಕೆಯನ್ನು ಹಾಕಿ, ಮದ್ಯಾಹ್ನದಲ್ಲಿ 2–3 ಸಲ ನೀರು ಹೊಡೆಯಬೇಕು ಹಾಗೂ ಕೊಟ್ಟಿಗೆಯ ನೆಲ ಮತ್ತು ಗೋಡೆಗಳಿಗೂ ಸಹ ನೀರು ಹೊಡೆಯಬೇಕು. ಇದರಿಂದ ಕೊಟ್ಟಿಗೆಯು ತಕ್ಕಮಟ್ಟಿಗೆ ತಂಪಾಗಿ ಉಳಿಯುತ್ತದೆ.<br>➢ ಕೊಟ್ಟಿಗೆಯಲ್ಲಿ ಗಾಳಿ ಸರಾಗವಾಗಿ ಆಡುವಂತೆ ವ್ಯವಸ್ಥೆ ಮಾಡಬೇಕು.<br>➢ ಸ್ವಚ್ಛವಾದ ನೀರನ್ನು ಮೇಲಿಂದ ಮೇಲೆ ಕುಡಿಸಬೇಕು.<br>ರಾಸುಗಳನ್ನು ಬಿಸಿಲಿಗೆ ಬಿಡಬಾರದು, ಬೆಳಿಗ್ಗೆ ಅಥವಾ ಸಂಜೆ ವೇಳೆಯಲ್ಲಿ ರಾಸುಗಳನ್ನು ಮೇಯಲು ಬಿಡಬೇಕು. |
| **ಕೋಳಿ ಸಾಕಾಣಿಕೆ** | **ಬೇಸಿಗೆ ತಿಂಗಳಿನಲ್ಲಿ ಕೋಳಿ ಸಾಕಾಣಿಕೆ ಸಲಹೆಗಳು :**<br>ಸರಾಸರಿ ಉಷ್ಣಾಂಶ 33–36 $^{o}C$ , ಸರಾಸರಿ ಆರ್ದ್ರತೆ ಪ್ರಮಾಣ, < 50 % (RH) **ಮತ್ತು** ಸರಾಸರಿ ಗಾಳಿಯ ವೇಗ < 5 ಕಿ.ಮೀ/ಘಂಟೆಗೆ<br>➢ ನೀರಿನ ಟ್ಯಾಂಕ್ ನ ಮೇಲ್ಭಾವಣಿಯನ್ನು ಒದ್ದೆಯಾದ ಗೋಣಿ ಚೀಲದಲ್ಲಿ ಮುಚ್ಚಿಡಬೇಕು ಇದರಿಂದ ನೀರು ಬಿಸಿಯಾಗುವುದನ್ನು ತಡೆಯಬಹುದು.<br>➢ ಬೇಸಿಗೆ ಹೆಚ್ಚಾಗಿರುವುದರಿಂದ ಕೋಳಿಗಳಿಗೆ ಬೆಳಗಿನ ಜಾವ ಮತ್ತು ಸಂಜೆ ವೇಳೆಯಲ್ಲಿ ನೀರನ್ನು ಯತೇಚ್ಛವಾಗಿ ಕೊಡಬೇಕು.<br>➢ ಕಿಟಕಿಯಲ್ಲಿ ಗಾಳಿಯು ಸರಾಗವಾಗಿ ಬೀಸುವ ಹಾಗೆ ನೋಡಿಕೊಳ್ಳಬೇಕು<br>➢ ಪೆಡೆಸ್ಟ್ರಾನ್ ಫ್ಯಾನ್ ಮೂಲಕ ಬಿಸಿ ಗಾಳಿಯು ಹೊರಹೊಗುವಂತೆ ನೋಡಿಕೊಳ್ಳಬೇಕು. |

**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**

**ಮೊಬೈಲ್ ಆಪ್:**

- ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮುನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.